## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 735 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12.03.2025 **(ಕಂದಾಯ ಇಲಾಖೆಯಿಂದ ವರ್ಗಾವಣೆಗೊಂಡಿರುತ್ತದೆ)** |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ಮಹಾನಗರ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಯಾವ ಯಾವ ಆಸ್ತಿಗಳು ಆಸ್ತಿ ತೆರಿಗೆವ್ಯಾಪ್ತಿಗೆ ಒಳಪಡುತ್ತವೆ ಮತ್ತು ಯಾವ ಆಸ್ತಿಗಳು ಒಳಪಡುವುದಿಲ್ಲ; ಇ-ಖಾತಾ ಪ್ರಕ್ರಿಯೆಯಿಂದ ಆಸ್ತಿದಾರರಿಗೆ ಆಗುವ ಉಪಯೋಗಗಳು ಯಾವುವು; ಇ-ಖಾತಾದಲ್ಲಿರುವ ವಿವಿಧ ನಮೂನೆಯ ಖಾತೆಗಳು ಯಾವುವು; | ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಪೌರ ಪಾಲಿಕೆಗಳ ಕಾಯ್ದೆ, 1976 ರ ಕಲಂ 110 ರಲ್ಲಿ ವಿನಾಯಿತಿ ನೀಡಲಾಗಿರುವ ಕಟ್ಟಡ ಹಾಗೂ ಭೂಮಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಕಟ್ಟಡಗಳಿಗೆ ಹಾಗೂ ಭೂಮಿಗೆ ಆಸ್ತಿ ತೆರಿಗೆ ಅನ್ವಯಿಸುತ್ತದೆ.<br><br>ಇತರೆ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಕರ್ನಾಟಕ ಪೌರ ಕಾಯ್ದೆ 1964 ರ ಕಲಂ 94(1-A) ಹಾಗೂ ಕಲಂ 94 A ರಡಿ ವಿನಾಯಿತಿ ನೀಡಲಾಗಿರುವ ಕಟ್ಟಡ ಹಾಗೂ ಭೂಮಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಕಟ್ಟಡಗಳಿಗೆ ಹಾಗೂ ಭೂಮಿಗೆ ಆಸ್ತಿ ತೆರಿಗೆ ಅನ್ವಯಿಸುತ್ತದೆ.<br><br>ಆಸ್ತಿದಾರರಿಗೆ ಇ-ಆಸ್ತಿ ತಂತ್ರಾಶ ಬಳಕೆ ಮಾಡಿ ಖಾತಾ ನೀಡಲಾಗುತ್ತಿದ್ದು, ಇವುಗಳಿಂದ ಸ್ವತ್ತಿನ ಮಾಲೀಕರಿಗೆ ತಮ್ಮ ಸ್ವತ್ತಿನ ಡಿಜಿಟಲ್ ಖಾತಾ ಸಿಗುವುದು.<br><br>ತಂತ್ರಾಂಶದಲ್ಲಿ ಸೃಜಿಸಿದ ಖಾತೆಗಳಲ್ಲಿ ಸಕ್ಷಮ ಅಧಿಕಾರಿಯ ಡಿಜಿಟಲ್ ಸಹಿ ಇರುವುದರಿಂದ ನಕಲು ಮಾಡಲು ಅವಕಾಶವಿರುವುದಿಲ್ಲ.<br><br>ಖಾತಾ ಪ್ರಕ್ರಿಯೆಗೆ ಇ-ಆಸ್ತಿ ಮತ್ತು ನೋಂದಣಿಗಾಗಿ ಇರುವ ಕಾವೇರಿ ತಂತ್ರಾಂಶ ಜೋಡಣೆ ಮಾಡಿರುವುದರಿಂದ ನೋಂದಣಿ ಪ್ರಕ್ರಿಯೆಗೆ ಅಥವಾ ಹಕ್ಕು ವರ್ಗಾವಣೆಗೆ ಯಾವುದೇ ಭೌತಿಕ ಖಾತಾ ದಾಖಲೆ ಹಾಗೂ ನೋಂದಾಯಿತ ಪತ್ರಗಳ ಅವಶ್ಯಕತೆ ಇರುವುದಿಲ್ಲ. |
| ಆ) | ಎ-ಖಾತಾ ಹಾಗೂ ಬಿ-ಖಾತಾಗಳಿರುವ ವ್ಯತ್ಯಾಸಗಳು ಯಾವುವು; ಇವುಗಳಿಂದಾಗುವ ಅನುಕೂಲ ಮತ್ತು ಅನಾನುಕೂಲಗಳು ಯಾವುವು; (ವಿಸ್ತೃತ ವಿವರಣೆ ನೀಡುವುದು) | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಗ್ರಾಮಠಾಣಾ, ಸರ್ಕಾರದಿಂದ ಹಕ್ಕು ಪತ್ರ/ ಮಂಜೂರಾತಿಯಾದ ಆಸ್ತಿಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ಬಡಾವಣೆಗಳಲ್ಲಿನ ಆಸ್ತಿಗಳನ್ನು ಅಧಿಕೃತ ಆಸ್ತಿಗಳೆಂದು ಪರಿಗಣಿಸಿ ಎ-ಖಾತಾ ಮಾಡಲಾಗುವುದು.<br><br>ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆಯಾಗದ ಬಡಾವಣೆಗಳಲ್ಲಿನ ಸ್ವತ್ತುಗಳು, ಕಂದಾಯ ಭೂಮಿಯಲ್ಲಿ ಉಪ ವಿಭಜನೆ ಮಾಡಿ ನಿವೇಶನಗಳಿಗಾಗಿ ವಿಂಗಡಣೆ |

| | | |
|---|---|---|
| | | ಮಾಡಿರುವ ಸ್ವತ್ತುಗಳು ಮತ್ತು ಅನಧಿಕೃತ ಕಟ್ಟಡಗಳನ್ನು ಅನಧಿಕೃತ ಸ್ವತ್ತುಗಳೆಂದು ಹಾಗೂ ಬಿ-ಖಾತಾಗಳೆಂದು ಪರಿಗಣಿಸಲಾಗುವುದು.<br>ಇವುಗಳಿಂದ ಸ್ವತ್ತಿನ ಮಾಲೀಕರಿಗೆ ತಮ್ಮ ಸ್ವತ್ತಿನ ಡಿಜಿಟಲ್ ಖಾತಾ ಸಿಗುವುದು. ಸ್ವತ್ತಿನ ವಿವರಗಳನ್ನು ನಕಲು ಮಾಡಲು ಅಥವಾ ಬೇರೆ ಯಾರೂ ದುರುಪಯೋಗ ಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ. |
| ಇ) | ಕಳೆದ 20-25 ವರ್ಷಗಳ ಹಿಂದೆ ವಿವಿಧ ಬಡಾವಣೆಗಳಲ್ಲಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಾಖಲಿಸುವ ಮೂಲಕ ಖರೀದಿ ಮಾಡಿದ ನಿವೇಶನ ಏಕಾಏಕಿ ಸರ್ಕಾರವು ಅನಧಿಕೃತ ಬಡಾವಣೆ ಎಂದು ಮತ್ತು ಅವುಗಳಿಗೆ ಬಿ-ಖಾತೆ ನೀಡಲು ಆದೇಶಿಸಿರುವುದರಿಂದ ಸಾರ್ವಜನಿಕರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ನ್ಯೂನ್ಯತೆಗಳನ್ನು ಸರಿಪಡಿಸುವ ಬಗ್ಗೆ ಸರ್ಕಾರದ ನಿಲುವೇನು? (ವಿವರಣೆ ನೀಡುವುದು) | ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಬಡಾವಣೆಗಳ ನಿರ್ಮಾಣ ಮಾಡಿ, ನಿವೇಶನಗಳನ್ನು ಮಾರಾಟ ಮಾಡಿದ್ದು, ಅಂತಹ ಸ್ವತ್ತುಗಳನ್ನು ಅನಧಿಕೃತ ಸ್ವತ್ತುಗಳೆಂದು ಪರಿಗಣಿಸಲಾಗಿರುತ್ತದೆ.<br>ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿರುವ ಪ್ರದೇಶಗಳಲ್ಲಿ ಮಹಾಯೋಜನೆ ಅನುಮೋದನೆಯಾಗಿರುವ ದಿನಾಂಕದಿಂದ ದಿನಾಂಕ:19-10-2013 ರ ಪೂರ್ವದಲ್ಲಿ ಬಂದಿರುವ ಎಲ್ಲಾ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ/556/ಮೈಅಪ್ರಾ/2013(1) ದಿ.28-5-2014 ರಲ್ಲಿ Karnataka Town and Country Planning (Regularisation of unatuthorized Development or Construction) Rules 2014 ಅನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು SLP(C)No. (s) 956-957/2017 ರಂದು ಮಧ್ಯಂತರ ತಡೆಯಾಜ್ಞೆಯನ್ನು ಮುಂದಿನ ಆದೇಶದವರೆಗೂ ಮುಂದುವರೆಸುವಂತೆ ಆದೇಶ ನೀಡಿರುತ್ತದೆ. ಈ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪು ಬಂದ ನಂತರ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು. |

**ಸಂಖ್ಯೆ: ನಅಇ 92 ಎಂಎನ್ಇ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು